



ಅರುಣ ಪಿ. ಭಟ್ಟ

## ವಾರಭವಿಷ್ಯ: 01.01.2026ರಿಂದ 07.01.2026ರವರೆಗೆ




ನೀವು ಕೈಗೊಳ್ಳುವ ಕೆಲಸದಿಂದ ವಿಶ್ವಾಸಾರ್ಹತೆ ಹಾಗೂ ಪ್ರತಿಭೆ ಹೆಚ್ಚಾಗುತ್ತದೆ. ಕೆಲವರು ನಿಮ್ಮನ್ನು ಅವಮಾನಕ್ಕೆ ಗುರಿ ಮಾಡಲಿದ್ದಾರೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಉತ್ತಮವಾಗಿದ್ದು, ಸಂತೋಷವಾಗಿ ಸಮಯ ಕಳೆಯಲಿದ್ದೀರಿ. ನಿಮ್ಮ ಕೆಲಸದ ಜತೆಜತೆಗೆ ಆಹಾರ ಪಥ್ಯದ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುತ್ತೀರಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಶುಭದಿನ: 06. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ಕೆಲಸ ಕಾರ್ಯಗಳಲ್ಲಿ ತೊಂದರೆ ಎದುರಾಗುತ್ತದೆ. ಕೋರ್ಟ್ ಕೇಸುಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತೀರಿ. ವಿರೋಧಿ ಪಾಳಯದ ಪಿತೂರಿಯಿಂದ ಹಿನ್ನಡೆ ಅನುಭವಿಸಬೇಕಾಗುತ್ತದೆ. ಅನಾರೋಗ್ಯ ಕಾಡಬಹುದು. ಸದಾ ಜತೆಗೆ ಇರುವವರೇ ಕೆಲವು ವಿಚಾರಗಳಲ್ಲಿ ನಿಮ್ಮನ್ನು ನಿಂದಿಸುವ ಸಾಧ್ಯತೆ ಇದೆ. ಶುಭದಿನ: 05. ಕಾಲಭೈರವನ ಸೇವೆ ಮಾಡಿರಿ.




ವಾರದ ಆರಂಭದಿಂದಲೇ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಸಂಬಂಧಿಕರ ಜತೆಗೆ ಉತ್ತಮ ಸಮಯ ಕಳೆಯುವ ಸಾಧ್ಯತೆ ಇದೆ. ವ್ಯವಹಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ಈ ವಾರ ಸ್ವಲ್ಪ ಹೆಚ್ಚೇ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯಾಪಾರದಲ್ಲಿ ನಿಮಗೆ ಅನುಕೂಲಕರ ಸನ್ನಿವೇಶ ಇರುತ್ತದೆ. ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವ ಅವಕಾಶ. ಶುಭದಿನ: 04. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.




ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ತರಲು ಸಕಾಲ. ಆದಾಯವು ಉತ್ತಮವಾಗಿರುತ್ತದೆ. ಮದುವೆ ವಿಚಾರವಾಗಿ ಸಂಬಂಧಿಕರ ಜತೆಗೆ ಮಾತುಕತೆ ನಡೆಸಲಿದ್ದೀರಿ. ಈ ವಾರ ಹಲವು ತುರ್ತು ಕೆಲಸಗಳನ್ನು ಪೂರ್ಣಗೊಳಿಸುವಲ್ಲಿ ನಿಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಕೆಲವು ಆರೋಗ್ಯ ಸಮಸ್ಯೆಗಳು ನಿಮ್ಮನ್ನು ಕಾಡಬಹುದು. ಶುಭದಿನ: 02. ಶಿವಕವಚ ಪಠಣ ಮಾಡಿರಿ.




ಕೆಲಸಕ್ಕೆ ವೇಗ ನೀಡಲು ಬಹಳ ಪ್ರಯತ್ನ ಮಾಡುತ್ತೀರಿ. ನೀವು ಹಾಕಿದ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲಿದ್ದೀರಿ. ಇತರರ ಸಮಸ್ಯೆಗಳನ್ನು ಬಗೆಹರಿಸಲು ಹೊಸ ದಾರಿಗಳನ್ನು ಸೂಚಿಸುತ್ತೀರಿ. ನಿಮ್ಮ ಕೆಲಸ ಕಾರ್ಯಗಳಿಗೆ ಬೇಕಾದ ಮಾಹಿತಿ ಕಲೆ ಹಾಕುತ್ತೀರಿ. ನೀವು ಕೆಲಸ ಮಾಡುವ ರೀತಿಗೆ ಸಹೋದ್ಯೋಗಿಗಳ ಜವಾಬ್ದಾರಿ ಹೆಚ್ಚಾಗುತ್ತದೆ. ಶುಭದಿನ: 04. ಲಿಂಗಾಷ್ಟಕ ಪಠಣ ಮಾಡಿರಿ.




ನಿಮ್ಮ ವಿವೇಚನೆಯ ಮೂಲಕ ವ್ಯಾಪಾರವನ್ನು ಉತ್ತಮವಾಗಿ ಮಾಡುತ್ತೀರಿ. ಇನ್ನು ಈ ಅವಧಿಯಲ್ಲಿ ಕುಟುಂಬ ಸದಸ್ಯರ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ಸಹೋದ್ಯೋಗಿಗಳ ಜತೆಗೆ ಉದ್ವಿಗ್ನವಾದ ಸನ್ನಿವೇಶ ಎದುರಾಗುತ್ತದೆ. ನಿಮ್ಮ ಬಹುತೇಕ ಸಮಸ್ಯೆಗಳಿಗೆ ಪರಿಹಾರಗಳು ದೊರೆಯುತ್ತವೆ. ವಿರಾಮಕ್ಕೆ ನಿಮ್ಮದೇ ಸಮಯ ದೊರೆಯುತ್ತದೆ. ಶುಭದಿನ: 03. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಈ ವಾರ ಕೌಟುಂಬಿಕ ಹಾಗೂ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸಿ. ಸಣ್ಣ ವಿಚಾರ ಕೂಡ ದೊಡ್ಡ ಬಿಕ್ಕಟ್ಟಾಗಿ ಎದ್ದು ನಿಲ್ಲುವ ಸಾಧ್ಯತೆ ಇದೆ. ಕೌಟುಂಬಿಕ ವಿಚಾರದಲ್ಲಿ ಕ್ರಮೇಣ ಪ್ರಗತಿ ಕಾಣುತ್ತದೆ. ವಾರದ ದ್ವಿತೀಯಾರ್ಧದಲ್ಲಿ ದಾನ ಧರ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತೀರಿ. ಉದ್ಯೋಗದಲ್ಲಿ ಅತ್ಯುತ್ತಮವಾದ ಪ್ರಗತಿ. ಶುಭದಿನ: 01. ಸೌಂದರ್ಯ ಲಹರಿ ಪಠಿಸಿರಿ.




ವಾರದ ಮೊದಲ ಭಾಗದಿಂದಲೇ ಆರೋಗ್ಯದಿಂದ ಇರುತ್ತೀರಿ. ಮುಖ್ಯವಾದ ವ್ಯವಹಾರವೊಂದರ ಭಾಗೀದಾರರಾಗುತ್ತೀರಿ. ರಾಜಕಾರಣಿಗಳಿಗೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ. ವರ್ಗಾವಣೆ ಆಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ನಿಮ್ಮ ಕೆಲಸವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಿದ್ದೀರಿ. ಶುಭದಿನ: 02. ಲಕ್ಷ್ಮೀನಾರಾಯಣ ಹೃದಯ ಪಠಿಸಿರಿ.




ಉದ್ಯೋಗಸ್ಥರು ತಮ್ಮ ವ್ಯಾಪಾರ ಉದ್ಯಮದ ಪ್ರಗತಿಯ ಪರಿಶೀಲನೆ ಮಾಡುವುದರಲ್ಲಿ ಸಕ್ರಿಯರಾಗುತ್ತೀರಿ. ನಿಮ್ಮ ಕಾರ್ಯಗಳನ್ನು ಈ ಹಿಂದೆಂದಿಗಿಂತಲೂ ವೇಗವಾಗಿ ಮಾಡಲಿದ್ದೀರಿ. ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಮನಸಿನಲ್ಲಿ ಇರುವ ವಿಚಾರವನ್ನು ನೇರವಾಗಿ ಹೇಳಲು ಪ್ರಯತ್ನಿಸಿ. ಉದ್ಯೋಗದ ಕಡೆಗೆ ನಿಮ್ಮ ಗಮನ ಹೆಚ್ಚಾಗುತ್ತದೆ. ಶುಭದಿನ: 04. ವಿಷ್ಣು ಸಹಸ್ರನಾಮ ಓದಿರಿ.




ಈ ವಾರ ಬಹಳ ಸಂತೋಷವಾಗಿ ಇರುತ್ತೀರಿ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಉತ್ತಮ ಲಾಭ ಪಡೆಯುವ ಅವಕಾಶ ಇದೆ. ವಿದ್ಯಾರ್ಥಿಗಳಿಗೆ ಯಶಸ್ಸು ಪಡೆಯುವ ಅವಕಾಶಗಳು ದೊರೆಯಲಿವೆ. ಬಂಧು ವರ್ಗದಿಂದ ಶುಭದಾಯಕ ವಾರ್ತೆಯನ್ನು ಕೇಳಲಿದ್ದೀರಿ. ಅತ್ಯುತ್ತಮ ಸಾಧನೆ ಮಾಡಲು ಅವಕಾಶ ದೊರೆಯಲಿದೆ. ಶುಭದಿನ: 07. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಅದ್ಭುತವಾದ ಸಾಧನೆ ಮಾಡುವ ಅವಕಾಶಗಳಿವೆ. ವ್ಯಾಪಾರಸ್ಥರು ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುತ್ತೀರಿ. ನಿಮ್ಮ ಆದಾಯ ಉತ್ತಮವಾಗಿರುತ್ತದೆ. ಸಾಮಾಜಿಕವಾಗಿ ಗೌರವ ಪಡೆಯಲಿದ್ದೀರಿ. ಮಕ್ಕಳ ಪ್ರಗತಿಯಿಂದ ಸಮಾಧಾನ ದೊರೆಯಲಿದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನಿರೀಕ್ಷಿತವಾದ ಯಶಸ್ಸು ದೊರೆಯಲಿದೆ. ಶುಭದಿನ: 05. ಸುಬ್ರಮಣ್ಯ ಜಪ ಮಾಡಿರಿ.




ಪ್ರವಾಸ ಮಾಡಬೇಕಾಗಿ ಬರುತ್ತದೆ. ಸಂಸ್ಥೆಯೊಂದರ ಜತೆ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಕುಟುಂಬದ ಬಗ್ಗೆ ಹೆಚ್ಚು ಯೋಚನೆ ಮಾಡಲಿದ್ದೀರಿ. ಹಲವು ಒಳ್ಳೆ ಅವಕಾಶಗಳು ನಿಮ್ಮ ಪಾಲಿಗೆ ದೊರೆಯಲಿವೆ. ವಿದ್ಯಾರ್ಥಿಗಳಿಗೆ ಪ್ರಗತಿ ಇದೆ. ಆದಾಯದಲ್ಲಿ ಹೆಚ್ಚಳ ಆಗುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಮಧುರವಾದ ಕ್ಷಣಗಳನ್ನು ಅನುಭವಿಸಲಿದ್ದೀರಿ. ಶುಭದಿನ: 06. ಶ್ರೀದುರ್ಗಾ ಆರಾಧನೆ ಮಾಡಿರಿ.